**ಕರ್ನಾಟಕ ಲೋಕಾಯುಕ್ತ**

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಬಿಡಿ/2873/2015/ಸನಿಕಾಸ–2

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಭೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 3.2.2017

**ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ**

**ವಿಷಯ:** ಪಾವಗಡ ಪುರಸಭೆಯ 23ನೇ ವಾಡಿನಲ್ಲಿರುವ ಕಟ್ಟಡಗಳು ಚರಂಡಿ, ರಸ್ತೆ ಹಾಗೂ ಸೆಟ್ ಬ್ಯಾಕ್ ಬಿಡದೆ ಕಟ್ಟಡ ಕಟ್ಟಿ ನಿಯಮ ಉಲ್ಲಂಘಿಸಿದವುಗಳನ್ನು ತೆರವುಗೊಳಿಸುವ ಕುರಿತು.

*******

ಶ್ರೀಮತಿ ಎಂ.ನಾಗರತ್ನಮ್ಮ, ತಂದೆ ಮಹಾಲಿಂಗಪ್ಪ, ಲಕ್ಷ್ಮೀಪತಿ ಬಡಾವಣೆ, ಪಾವಗಡ, ತುಮಕೂರು ಜಿಲ್ಲೆ, (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ (1) ಶ್ರೀ ರಂಗಸ್ವಾಮಿ, ಮುಖ್ಯಾಧಿಕಾರಿಗಳು, (2) ಶ್ರೀ ಶಂಸುದ್, ಆರೋಗ್ಯ ನಿರೀಕ್ಷಕರು, (3) ಶ್ರೀ ಪ್ರಕಾಶ್, ಅಭಿಯಂತರು, ಮತ್ತು (4) ಶ್ರೀ ನಾಗಭೂಷಣ, ಕಂದಾಯ ನಿರೀಕ್ಷಕರು, ಪುರಸಭೆ, ಪಾವಗಡ, ತುಮಕೂರು ಜಿಲ್ಲೆ,(ಇನ್ನು ಮುಂದೆ ಕ್ರಮವಾಗಿ 1ರಿಂದ 4ನೇ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:–**

ದೂರುದಾರರು ತಮ್ಮ ದೂರಿನಲ್ಲಿ ತುಮಕೂರು ಜಿಲ್ಲೆಯ ಪಾವಗಡದ 23ನೇ ವಾರ್ಡಿನಲ್ಲಿ ಸಂತೇಮೈದಾನ, ಕನ್ನಿಕಾಪರಮೇಶ್ವರಿ ದೇವಸ್ಥಾನದ ಮುಖ್ಯರಸ್ತೆ, ಆಂಜನೇಯಶೆಟ್ಟಿ ಕಲ್ಯಾಣಮಂಟಪ ಇವುಗಳ ಮುಂದೆ ಇರುವ ರಸ್ತೆ ಮತ್ತು ಚರಂಡಿಗಳನ್ನು ಒತ್ತುವರಿ ಮಾಡಿಕೊಂಡು ಸಾರ್ವಜನಿಕರು ಕಂಪೌಂಡ್ ಹಾಕಿಕೊಂಡಿರುತ್ತಾರೆ. ಯೋಗಮಂದಿರದ ಮುಂದೆ ಇರುವ ಪ್ರತಿಯೊಂದು ಮನೆಯು ಸಹ 30 ಅಡಿ ಜಾಗ ಇರುವುದಿಲ್ಲ, ಆದರೆ 10 ಅಡಿ ಮಾತ್ರ ಇರುತ್ತದೆ. ತಾಲ್ಲೂಕು ಕಛೇರಿಯಲ್ಲಿ ಕೆಲಸಮಾಡುವ ಸೋಮಸ್ವಾಮಿ ಅವರ ಮನೆಯ ಹಿಂಭಾಗ ಮತ್ತು ಮುಂಭಾಗ 30 *40 ಅಡಿ

24

ರಸ್ತೆಯನ್ನು ಅತಿಕ್ರಮಿಸಿಕೊಂಡು ಮನೆಯನ್ನು ಕಟ್ಟಿರುತ್ತಾರೆ. ನರಸರೆಡ್ಡಿ, ಸುಬ್ರಾಯಪ್ಪ, ಇವರು ಸಹ ರಸ್ತೆಯನ್ನು ಅತಿಕ್ರಮಿಸಿ ಮನೆಕಟ್ಟಿರುತ್ತಾರೆ. ಈ ಬಗ್ಗೆ ಕ್ರಮಕೈಗೊಳ್ಳುವಂತೆ ಎದುರುದಾರರಿಗೆ ವಿನಂತಿಸಿದರೂ ಸಹಾ ಯಾವುದೇ ಕ್ರಮ ಜರುಗಿಸಿರುವುದಿಲ್ಲ. ಆದ್ದರಿಂದ ಎದುರುದಾರರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ದೂರು ಸಲ್ಲಿಸಿದ್ದಾರೆ.

3. 1ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ತಾನು ದಿ.30.8.2015ರಂದು ನಿವೃತ್ತಿಯಾಗಿದ್ದು, ಈಗ ಹಾಲಿ ಕೆಲಸ ನಿರ್ವಹಿಸುತ್ತಿರುವ ಕೆ.ಜೆ.ಅಮರನಾಥ್, ಮುಖ್ಯಾಧಿಕಾರಿಗಳು, ಪುರಸಭೆ, ಪಾವಗಡ ಇವರಿಗೆ ಸೂಕ್ತ ನಿರ್ದೇಶನ ನೀಡಬೇಕು ಹಾಗೂ ತನ್ನನ್ನು ಈ ಪ್ರಕರಣದಿಂದ ಕೈಬಿಡಬೇಕೆಂದು ಕೇಳಿಕೊಂಡಿರುತ್ತಾರೆ.

2ನೇ ಎದುರುದಾರರು, ತಾನು ವಾರ್ಡ್ ನಂ.1 ರಿಂದ 13ನೇ ವಾರ್ಡುಗಳ ವ್ಯಾಪ್ತಿಯಲ್ಲಿ ಕರ್ತವ್ಯ ನಿರ್ವಹಿಸಿದ್ದು, 23ನೇ ವಾರ್ಡು ತನ್ನ ವ್ಯಾಪ್ತಿಗೆ ಬರುವುದಿಲ್ಲ. ಆದ್ದರಿಂದ ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೇಳಿಕೊಂಡಿದ್ದಾರೆ.

3ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ 23ನೇ ವಾರ್ಡಿನ ಪ್ರದೇಶದಲ್ಲಿ ಹಲವು ಬಡಾವಣೆಗಳನ್ನು ಖಾಸಗಿಯವರು ನಿರ್ಮಿಸಿದ್ದು, ಭೂಪರಿವರ್ತನೆಮಾಡಿಸಿಕೊಂಡು ರೊಪ್ಪ ಪಂಚಾಯತಿಯಲ್ಲಿ ನಕ್ಷೆಯನ್ನು ಅನುಮೋದನೆ ಪಡೆದಿರುವುದು ಕಂಡುಬಂದಿರುತ್ತದೆ. ಈ ಪ್ರದೇಶದಲ್ಲಿ ಬಹಳ ವರ್ಷಗಳ ಹಿಂದೆಯೇ ಕಟ್ಟಡಗಳನ್ನು ಸಹ ನಿರ್ಮಿಸಿರುತ್ತಾರೆ. ಈ ರೀತಿ ನಿಯಮಬಾಹಿರ ಕಟ್ಟಡ ನಿರ್ಮಿಸುತ್ತಿರುವುದು ಮನಗಂಡು ಕೌನ್ಸಿಲ್ ಸಭೆಯಲ್ಲಿ ವಿಷಯ ಮಂಡಿಸಿದಾಗ ಹೊಸ ನಿಯಮಾವಳಿಯ ಅನ್ವಯ ಹೊಸದಾಗಿ ನಿರ್ಮಾಣ ಮಾಡುವ ಕಟ್ಟಡಗಳಿಗೆ ನಿಯಮದ ಪ್ರಕಾರ ಸೆಟ್ ಬ್ಯಾಕ್, ಮಾರ್ಜಿನ್, ರಸ್ತೆ, ಇತ್ಯಾದಿಗಳನ್ನು ಬಿಟ್ಟು ಕಟ್ಟಡ ಪರವಾನಿಗೆ ನೀಡಲು ತೀರ್ಮಾನಿಸಲಾಗಿರುತ್ತದೆ. 3 ವರ್ಷಗಳಿಂದ ಈ ಪದ್ಧತಿ ಜಾರಿಯಲ್ಲಿರುತ್ತದೆ. ಆದ್ದರಿಂದ ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೇಳಿಕೊಂಡಿದ್ದಾರೆ.

4ನೇ ಎದುರುದಾರರು ಪುರಸಭೆಯಲ್ಲಿ ತೆರವುಗೊಳಿಸುವ ಕಾರ್ಯವನ್ನು ಕಿರಿಯ ಅಭಿಯಂತರು ಹಾಗೂ ಆರೋಗ್ಯ ಶಾಖೆಯ ಸಿಬ್ಬಂದಿ ಮುಖ್ಯಾಧಿಕಾರಿಗಳ ಆದೇಶ ಅನುಸರಿಸಿ

COMPT/UPLOK/BD-2873/2015/DRE-2

ನಿರ್ವಹಿಸುತ್ತಿರುತ್ತಾರೆ. ಆದ್ದರಿಂದ ಇದು ತನ್ನ ಅಧಿಕಾರ ವ್ಯಾಪ್ತಿಗೆ ಬರುವುದಿಲ್ಲ. ಆದ್ದರಿಂದ ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೇಳಿಕೊಂಡಿದ್ದಾರೆ.

4. ದೂರುದಾರರು ತಮ್ಮ ಪ್ರತ್ಯುತ್ತರ ಸಲ್ಲಿಸಿರುವುದಿಲ್ಲ.

5. ದೂರುದಾರರು ಹಾಜರುಪಡಿಸಿದ ದೂರು ಮತ್ತು ದಾಖಲಾತಿಗಳು, ಆಕ್ಷೇಪಣೆ ಮತ್ತು ದಾಖಲಾತಿಗಳನ್ನು ಪರಿಶೀಲಿಸಿದಾಗ, ದೂರುದಾರರು ವಾಸವಿರುವ 23ನೇ ವಾರ್ಡಿನ ನಿವಾಸಿಗಳು ಚರಂಡಿ ಮತ್ತು ರಸ್ತೆಯನ್ನು ಅತಿಕ್ರಮಿಸಿ ಮನೆ ಕಟ್ಟಿರುವುದನ್ನು ಎದುರುದಾರರು ಅಲ್ಲಗಳೆದಿರುವುದಿಲ್ಲ. ಹೀಗಾಗಿ 3ನೇ ಎದುರುದಾರರ ಆಕ್ಷೇಪಣೆಯಲ್ಲಿಯ ಅಂಶಗಳನ್ನು ಗಮನಿಸಿದಾಗ, ಈ ಮೊದಲೇ ಭೂಪರಿವರ್ತನೆ ಮಾಡಿಕೊಂಡು ಪಂಚಾಯತಿಯಿಂದ ಅನುಮೋದನೆ ಪಡೆದುಕೊಂಡು ಮನೆಗಳನ್ನು ಕಟ್ಟಿರುತ್ತಾರೆ. ಹೀಗಾಗಿ ತಾವು ಕ್ರಮ ಕೈಗೊಳ್ಳಲು ಆಗುವುದಿಲ್ಲವೆಂಬಂತೆ ಆಕ್ಷೇಪಣೆ ಸಲ್ಲಿಸಿದ್ದಾರೆ.

6. 23ನೇ ವಾರ್ಡಿನ ನಿವಾಸಿಗಳು ಪುರಸಭೆಯ ವ್ಯಾಪ್ತಿಯಲ್ಲಿ ಬರುವುದರಿಂದ ಅವರು ಪುರಸಭೆಯ ನಿಯಮಗಳಂತೆ ಅವರ ಕಟ್ಟಡ ಇರಬೇಕಾಗುತ್ತದೆ. ಒಂದುವೇಳೆ ಇವರು ನಿಯಮ ಉಲ್ಲಂಘಿಸಿ ಕಟ್ಟಡ ಕಟ್ಟಿದ್ದರೆ ಅವುಗಳನ್ನು ತೆರವುಗೊಳಿಸುವ ಅಧಿಕಾರ ಪುರಸಭೆಗೆ ಇರುತ್ತದೆ. ಕೇವಲ ಮೊದಲು ಮನೆ ಕಟ್ಟಿರುತ್ತಾರೆ ಎಂಬ ಕಾರಣಕ್ಕೆ ಅವರ ವಿರುದ್ಧ ಕ್ರಮಕೈಗೊಳ್ಳದಿರುವುದು ಕಾನೂನುಬಾಹಿರವೆನಿಸುತ್ತದೆ. ದೂರುದಾರರು ದೂರಿನಲ್ಲಿ ನಮೂದಿಸಿರುವ 23ನೇ ವಾರ್ಡಿನ ಎಲ್ಲಾ ಕಟ್ಟಡಗಳು ಚರಂಡಿ ಮತ್ತು ರಸ್ತೆಗಳನ್ನು ಅತಿಕ್ರಮಿಸಿದ್ದರೆ ಅವುಗಳನ್ನು ತೆರವುಗೊಳಿಸಿ, ಸಾರ್ವಜನಿಕರ ಆರೋಗ್ಯ ಮತ್ತು ಓಡಾಟಕ್ಕೆ ಅನುಕೂಲ ಮಾಡಿಕೊಡಬೇಕಾಗಿದ್ದು, ಪುರಸಭೆಯ ಕರ್ತವ್ಯವಾಗಿರುತ್ತದೆ.

7. ದೂರುದಾರರು ದೂರು ಸಲ್ಲಿಸಿದಾಗ ಎದುರುದಾರರೆಲ್ಲರೂ ಕರ್ತವ್ಯನಿರ್ವಹಿಸುತ್ತಿರುವುದರಿಂದ ಅವರು ಆಗ ಕ್ರಮಕೈಗೊಳ್ಳದೆ ಇರುವುದರಿಂದ ದೂರುದಾರರು ಲೋಕಾಯುಕ್ತ ಸಂಸ್ಥೆಯಲ್ಲಿ ದೂರು ಸಲ್ಲಿಸಿರುವುದು ಕಂಡುಬರುತ್ತದೆ.

8. ಆದ್ದರಿಂದ, ಪಾವಗಡ ಪುರಸಭೆಯ 23ನೇ ವಾಡಿನಲ್ಲಿರುವ ಕಟ್ಟಡಗಳು ಚರಂಡಿ, ರಸ್ತೆ ಹಾಗೂ ಸೆಟ್ ಬ್ಯಾಕ್ ಬಿಡದೆ ಕಟ್ಟಡ ಕಟ್ಟಿ ನಿಯಮ ಉಲ್ಲಂಘಿಸಿದವುಗಳನ್ನು ತೆರವುಗೊಳಿಸಲು ಸಂಬಂಧಪಟ್ಟವರಿಗೆ ಸೂಕ್ತ ನಿರ್ದೇಶನ ನೀಡುವಂತೆ ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984 ಕಲಂ.12(1)ರಡಿಯಲ್ಲಿ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

26

9. ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಒಂದು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 14/2/17.

**[ ನ್ಯಾಯಮೂರ್ತಿ ಸುಭಾಷ್ ಬಿ.ಆಡಿ ]**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ,ಬೆಂಗಳೂರು.**